## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಇವರ ಕಛೇರಿಗೆ Multi-Printer ಜೆರಾಕ್ಸ್ ಯಂತ್ರವನ್ನು ಸರಬರಾಜು ಮಾಡಿರುವುದಕ್ಕೆ ಮೆ: ರಾಯ್‌ಸೋನಿ ಅಂಡ್ ಕಂಪನಿರವರಿಗೆ ಹಣ ಪಾವತಿಸುವ ಬಗ್ಗೆ.

**ಓದಲಾಗಿದೆ:**
1. ವ್ಯವಸ್ಥಾಪಕ ನಿರ್ದೇಶಕರು, ಸರಬರಾಜು ಹಾಗೂ ವಿತರಣೆ ನಿರ್ದೇಶನಾಲಯ, ಭಾರತ ಸರ್ಕಾರ, ಇವರ ಪತ್ರ ಸಂಖ್ಯೆ: DCMOM-EB/IT-3/RC-D10Q0000/ 0614/ 83/F0706/2025 ದಿನಾಂಕ: 21.10.2013 ಮತ್ತು 20.11.2014.
2. ಪತ್ರ ಸಂಖ್ಯೆ: ಪಿಡಿ 26 ಎಸ್‌ಪಿಎ 2014, ದಿನಾಂಕ: 22.12.2014.
3. ಮೆ ರಾಯ್‌ಸೋನಿ ಅಂಡ್ ಕಂಪನಿ, ಬೆಂಗಳೂರು, ಇವರ ಬಿಲ್ ಸಂಖ್ಯೆ: 274, ದಿನಾಂಕ: 26.12.2014.

**ಪ್ರಸ್ತಾವನೆ :**

Digital Copier and Multifunctional Office Machines ಗಳನ್ನು ಕೇಂದ್ರ ಸರ್ಕಾರವು ನಿಗದಿಪಡಿಸಿರುವ DGS & D ದರದಲ್ಲಿ ಸರಬರಾಜು ಮಾಡಲು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರಬರಾಜು ವಿತರಣೆ ನಿರ್ದೇಶನಾಲಯ, ಭಾರತ ಸರ್ಕಾರ, ಇವರ ಪತ್ರದಲ್ಲಿ ಮೆ. ರಿಕೋ ಇಂಡಿಯಾ ಲಿಮಿಟೆಡ್ ಸಂಸ್ಥೆಯನ್ನು ಅಧಿಕೃತ ಸಂಸ್ಥೆ ಎಂದು ಗುರುತಿಸಲಾಗಿದೆ ಹಾಗೂ ರೀಕೋ ಉತ್ಪನ್ನಗಳನ್ನು ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಸರಬರಾಜು ಮಾಡಲು ಮೆ: ರಾಯ್‌ಸೋನಿ ಅಂಡ್ ಕಂಪನಿರವರನ್ನು ಸರ್ಕಾರಿ ಮಾರಾಟ ಹಾಗೂ ಸೇವೆಗಳಿಗೆ ಅಧಿಕೃತ ಸಂಸ್ಥೆಯೆಂದು ಗುರುತಿಸಿ ಮೆ: ರೀಕೋ ಇಂಡಿಯಾ ಲಿಮಿಟೆಡ್‌ರವರು Dealership Certificate ನೀಡಿರುತ್ತಾರೆ.

ರಾಜ್ಯ ಯೋಜನಾ ಮಂಡಳಿಯ ಕಾರ್ಯದರ್ಶಿಯವರ ಆಪ್ತ ಕಛೇರಿಯ ಉಪಯೋಗಕ್ಕಾಗಿ DGS & D ದರದಲ್ಲಿ ಒಂದು Multi-Printer ಜೆರಾಕ್ಸ್ ಯಂತ್ರವನ್ನು ಒದಗಿಸುವಂತೆ ಮೆ: ರಾಯ್‌ಸೋನಿ ಅಂಡ್ ಕಂಪನಿರವರನ್ನು ಮೇಲಿನ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಕೋರಲಾಗಿದೆ. ಅದರಂತೆ ಸದರಿ ಸಂಸ್ಥೆರವರು Multi-Printer ಜೆರಾಕ್ಸ್ ಯಂತ್ರದ ಮಾದರಿ ಸಂಖ್ಯೆ: ರಿಕೋ MPC2003SP+ARDF ಯಂತ್ರವನ್ನು ರಾಜ್ಯ ಯೋಜನಾ ಮಂಡಳಿಯ ಕಾರ್ಯದರ್ಶಿಯವರ ಆಪ್ತ ಕಛೇರಿಗೆ ಸರಬರಾಜು ಮಾಡಿ DGS & D rate contract ಅಂಗೀಕರಿಸಿ ಇದಕ್ಕೆ ತಗುಲಿದ ವೆಚ್ಚ ರೂ.2,24,352.00 ಹಾಗೂ ವ್ಯಾಟ್ ದರ ರೂ.23,736.00 ಒಟ್ಟು ರೂ.2,37,356.00 ಗಳನ್ನು ಪಾವತಿಸುವಂತೆ ಕೋರಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಬಿಲ್ಲನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ ಪಿಡಿ 26 ಎಸ್‌ಪಿಎ 2014
### ಬೆಂಗಳೂರು, ದಿನಾಂಕ: 19.06.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಇವರ ಕಛೇರಿಗೆ Multi-Printer ಮಾದರಿ ಸಂಖ್ಯೆ: RICHO MPC2003SP +ARDF

.......2

ಒಂದು ಯಂತ್ರವನ್ನು ಮೆ: ರಾಯ್‌ಸೋನಿ ಅಂಡ್ ಕಂಪನಿ, ನಂ.157, 5ನೇ ಕ್ರಾಸ್, 1ನೇ ಫೇಸ್, ಓಕಳಿಪುರಂ, ಬೆಂಗಳೂರು, ಇವರು ಸರಬರಾಜು ಮಾಡಿದ್ದು ಇದಕ್ಕೆ ತಗುಲಿದ ವೆಚ್ಚ ರೂ.2,24,352.00 ಹಾಗೂ ವ್ಯಾಟ್ ದರ ರೂ.23,736.00 ಒಟ್ಟು ಮೊತ್ತ ರೂ.2,37,356.00 ಗಳನ್ನು ಸದರಿ ಸಂಸ್ಥೆಗೆ ಪಾವತಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು:

1. ಸರಬರಾಜು ಮಾಡುತ್ತಿರುವ ಯಂತ್ರವು ವಿವಿಧ ತಾಂತ್ರಿಕತೆಯಿಂದ ಕೂಡಿದ್ದು, ನಿರ್ವಹಣೆ ಸಂದರ್ಭದಲ್ಲಿ ಯಾವುದೇ ತಾಂತ್ರಿಕ ತೊಂದರೆಯಾದಲ್ಲಿ ಮೇಲ್ಕಂಡ ಕಂಪನಿಯವರೇ ಜವಾಬ್ದಾರರಾಗಿರುತ್ತಾರೆ.
2. ಸರ್ವೀಸಿಂಗ್‌ಗಾಗಿ ಯಾವುದೇ ಸಂದರ್ಭದಲ್ಲಿ ತಿಳಿಸಿದರೂ ತುರ್ತಾಗಿ ದುರಸ್ಥಿ ಕಾರ್ಯ ನಿರ್ವಹಿಸುವುದು.
3. DGS & D ದರದಲ್ಲಿ ವ್ಯತ್ಯಾಸ ಉಂಟಾದಲ್ಲಿ, ಇದಕ್ಕೆ ಸರ್ಕಾರವು ಹೊಣೆಯಾಗಿರುವುದಿಲ್ಲ.
4. ಜೆರಾಕ್ಸ್ ಯಂತ್ರದಲ್ಲಿ ದೋಷ ಅಥವಾ ಸರ್ವೀಸಿಂಗ್ ಬಗ್ಗೆ ಅಸಮಾಧಾನ ಉಂಟಾದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

2. ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2015-16ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ "3451-00-101-4-00-051 (ಯೋಜನೇತರ)" ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಭರಿಸತಕ್ಕದ್ದು.

3. ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಪಿಡಿ 113 ಎಸ್‌ಪಿಎಂ 96, ದಿನಾಂಕ: 17.5.1997ರಲ್ಲಿ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ ರವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-3)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.
3. ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ (1 ಮತ್ತು 2) – ಸಂಗ್ರಹಣೆಗಾಗಿ.
6. ಮೆ: ರಾಯ್‌ಸೋನಿ ಅಂಡ್ ಕಂಪನಿ, ನಂ.157, 5ನೇ ಕ್ರಾಸ್, 1ನೇ ಫೇಸ್, ಓಕಳಿಪುರಂ, ಬೆಂಗಳೂರು-21
7. ಸಹಾಯಕ ಖಜಾನಾಧಿಕಾರಿ, ರಾಜ್ಯ ಯೋಜನಾ ಮಂಡಳಿ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.